ಕಿರಿಯುತ್ತಾ ಇದ್ದ ಗೋವಿಂದ. ಮೂರನೇ ದಿನದಿಂದ ತನ್ನ ಹಳೆಯ ಕತೆಗಳನ್ನೂ ದೇವಸ್ಥಾನದವರು ಮಾಡಿದ ಮೋಸವನ್ನೂ ತಮ್ಮನ ಹೆಂಡತಿ ಮಾಲತಿ ತನ್ನೆಡೆಗೆ ಸಿಡುಕುವುದನ್ನೂ ಸೇರಿದಂತೆ, ತನ್ನ ತಪ್ಪುಗಳನ್ನು ಎಲ್ಲೂ ಬಿಟ್ಟು ಕೊಡದೇ ಹೇಳಿದ್ದನ್ನೇ ಹೇಳಿ ಹೇಳಿ ಕೊನೆಯ ಪ್ರಯತ್ನವೆಂಬಂತೆ ಕಣ್ಣು ಒದ್ದೆ ಮಾಡಿಕೊಂಡು ತನ್ನೊಟ್ಟಿಗೆ ಶ್ಯಾಮರಾಯರ ಕಣ್ಣಂಚಲ್ಲೂ ಎರಡು ಹನಿ ನೀರು ಬರಿಸಿದ. ವೆಂಕಟ ಭಟ್ಟರು ಪಟ್ಟ ಕಷ್ಟಗಳನ್ನು ನೋಡಿದ್ದ ಶ್ಯಾಮರಾಯರಿಗೆ ಅವರ ಕಾಲಾನಂತರ ಮಗನೂ ಕಷ್ಟ ಪಡುತ್ತಿರುವುದು ಕೇಳಿ ಅಯ್ಯೋ ಪಾಪ ಎನ್ನಿಸಿದ್ದು ಸಹಜ. ಗೋವಿಂದನ ಕತೆಗಳನ್ನೆಲ್ಲಾ ಕೇಳಿದ ಮೇಲೆ ಅವನೆಡೆಗೆ ಶ್ಯಾಮರಾಯರಲ್ಲಿ ಬೆಳೆದ ಮೃದು ಧೋರಣೆ ಶಾರದಕ್ಕನ ಗಮನಕ್ಕೆ ಬರಲು ಹೆಚ್ಚು ಹೊತ್ತು ಹಿಡಿಯಲಿಲ್ಲ. ಒಮ್ಮೊಮ್ಮೆ ತಲೆಬುಡವಿಲ್ಲದೆ ಸಾಗುತ್ತಿದ್ದ ಗೋವಿಂದನ ಮಾತುಗಳು ಶಾರದಕ್ಕನಿಗೂ ತಲೆನೋವು ತರಿಸುತ್ತಿದ್ದ ಕಾರಣ ಎಚ್ಚೆತ್ತುಕೊಂಡ ಶಾರದಕ್ಕ ಶ್ಯಾಮರಾಯರ ಬಳಿ ಗೋವಿಂದನನ್ನು ಆದಷ್ಟು ಬೇಗ ಹೊರಡಿಸುವ ಮಾತನ್ನು ಮುಂದಿಟ್ಟಳು. ಮನೆಗೆ ಬಂದ ಅತಿಥಿಗಳಿಗೆ ಹೊರಡಿ ಎಂದೆಲ್ಲಾ ಹೇಳುವುದು ಸಭ್ಯಸ್ಥಿಗೆ ಅಲ್ಲವೆಂಬ ಶ್ಯಾಮರಾಯರ ತತ್ತ್ವದ ಮುಂದೆ ಶಾರದಕ್ಕನ ಉಪಾಯ ಫಲಿಸಲಿಲ್ಲ.

ಗ್ರಹಚಾರ ಎಂಬಂತೆ ಅದೇ ದಿನ ಬಾಳೆಎಲೆ ಕೊಯ್ಯಲು ತೋಟಕ್ಕೆ ಹೋಗಿದ್ದ ಶ್ಯಾಮರಾಯರು ಕೈ ಕೊಯ್ದುಕೊಂಡರು. ಬಳಬಳನೆ ರಕ್ತ ಇಳಿದು, ಕಣ್ಣುಗತ್ತಲೆಗಟ್ಟಿ ರಕ್ತ ನಿಲ್ಲಿಸಬೇಕಾದರೆ ಮಳೆಗಾಲದಲ್ಲಿ ಹಳ್ಳಕ್ಕೆ ಕಟ್ಟು ಹಾಕಿದಷ್ಟೇ ಪ್ರಯಾಸವಾಯಿತು. ಕೈ ಕೊಯ್ದುಕೊಂಡದ್ದಕ್ಕಿಂತ ಹೆಚ್ಚಾಗಿ ದಿನನಿತ್ಯದ ಕೆಲಸಗಳನ್ನು ಮಾಡುವುದು ಕಷ್ಟವಾಯಿತಲ್ಲ ಎಂಬುದೇ ಶ್ಯಾಮರಾಯರಿಗೆ ದೊಡ್ಡ ತಲೆಬಿಸಿಯಾಯಿತು. ಕೈ ಸರಿಯಾಗುವ ತನಕ ಕೊಟ್ಟಿಗೆ ಕೆಲಸವನ್ನು ಮಾಡಿ ಕೊಡುವಂತೆ ಹೇಳಿ ಅದಕ್ಕೊಂದಷ್ಟು ಸಂಬಳ ನಿಗದಿ ಮಾಡಿ ಅಪರೂಪಕ್ಕೆ ಮುಖ ತೋರಿಸುತ್ತಿದ್ದ ಕೂಲಿ ಆಳು ಬೂದನಿಗೆ ಹಾಗೋ ಹೀಗೋ ಜವಾಬ್ದಾರಿ ವಹಿಸಿದರು. ಒಂದಕ್ಕೆ ಎರಡು ಮಾತನಾಡುವ ಬೂದ ಬೇಕುಬೇಕಂತಲೇ, "ದ್ಯಾವಸ್ಥಾನದ ಪೂಜೆನೂ ಮಾಡ್ಬೇಕಾ ಅಯ್ಯಾ" ಎಂದು ಕಾಲೆಳೆದಾಗ ಮಾತ್ರ ಶ್ಯಾಮರಾಯರ ಪಿತ್ತ ನೆತ್ತಿಗೇರಿತು. ಒಂದಕ್ಕೆ ಎರಡರಷ್ಟು ಸಂಬಳ ಕೊಡುತ್ತೇವೆಂದರೂ ಕೆಲಸಕ್ಕೆ ಆಳುಗಳು ಸಿಗದ ಕಾಲದಲ್ಲಿ, ಹೆಚ್ಚು ತಕಾರರು ಮಾಡದೇ ಒಪ್ಪಿಕೊಂಡಿದ್ದ ಬೂದನಿಗೂ ದಬಾಯಿಸಿ ಯಡವಟ್ಟು ಮಾಡಿಕೊಳ್ಳಲು ಬಯಸದ ಶ್ಯಾಮರಾಯರು ಅವುಡು ಕಚ್ಚಿಕೊಂಡು ಭರಭರನೆ ಒಳ ನಡೆದರು.

ರಾಯರಿಗೆ ಮಾಳಿಗೆ ಒಳಗಿನ ಕಿಟಕಿ ಬುಡದಲ್ಲಿ ಕಾಫಿ ಕುಡಿಯುತ್ತಾ ಕುಕ್ಕರುಗಾಲಿನಲ್ಲಿ ಕೂತಿದ್ದ ಗೋವಿಂದ ಕಣ್ಣಿಗೆ ಬಿದ್ದ. ಬೂದನ ಮೇಲಿನ ಸಿಟ್ಟಿಗೆ ಕೆಂಪಾಗಿದ್ದ ಶ್ಯಾಮರಾಯರು ಕೊಂಚ ಸಾವರಿಸಿಕೊಂಡು ತಗ್ಗಿದ ಧ್ವನಿಯಲ್ಲಿ, "ಏಯ್... ಗೋವಿಂದ ಒಂದ್ ಹದಿನೈದ್ ದಿನದ ಮಟ್ಟಿಗೆ ದೇವಸ್ಥಾನದ ಪೂಜೆ ಮಾಡ್ಕೊಡು ಮಾರಾಯ. ಈ ಕೈ ನೋವಿನ ದೆಸೇಲಿ ನೆಟ್ಟಗೆ ಹರಿವಾಣ ಎತ್ತಿಡಕ್ಕೂ ಆಗಲ್ಲ" ಎಂದರು. ಕಾಫಿ ಕುಡಿಯುವುದರಲ್ಲೇ ತಲ್ಲೀನನಾಗಿದ್ದ ಗೋವಿಂದನಿಗೆ ಎಚ್ಚರವಾಗಿದ್ದು ಶ್ಯಾಮರಾಯರು ಎರಡನೇ ಬಾರಿಗೆ ಮತ್ತದೇ ಮಾತನ್ನು ಹೇಳಿದಾಗ. ಕಾಫಿ ಲೋಟವನ್ನು ಕೆಳಗಿಟ್ಟವನು, "ನಿಮ್ ದೇವ್ರಿಗೆಲ್ಲಾ ನಾವ್ ಮಾಡೋ ಪೂಜೆ ಸರಿಯಾಗುತ್ತೋ ಇಲ್ವೋ" ಎಂದು ಹಲ್ಲು ಕಿರಿದ. ಬೆಳಗ್ಗೆ ಒಂಬತ್ತಾದರೂ ಹಾಸಿಗೆಯಿಂದ ಏಳದ ಗೋವಿಂದ ಅಷ್ಟು ಸುಲಭಕ್ಕೆ ಒಪ್ಪಿಕೊಳ್ಳುವ ಆಸಾಮಿಯಲ್ಲವೆಂದು ಅರಿತ ಶ್ಯಾಮರಾಯರು, "ನಿಮ್ಮ ಹಳೇ ದೇವಸ್ಥಾನಕ್ಕಿಂತ ಜಾಸ್ತಿ ಸಂಬಳ ಹಾಕಿ ಕೊಡ್ತೀನಿ. ಕೈ ವಾಸಿ ಆಗೋ ತನಕ ಮಾಡು. ನಿಂಗ್ ಹೇಗೂ ಸದ್ಯಕ್ಕೆ ಬೇರೆ ಕೆಲಸ ಇಲ್ವಲಾ" ಎಂದು ಅವನ ಮುಖ ನೋಡಿದರು. "ಹಾಗಂತೀರಾ, ಆಗ್ಲಿ... ನಿಮ್ಮ ದೇವ್ರ ತಲೆ ಮೇಲೆ ನೀರ್ ಹಾಕೋ ಯೋಗ ಇದ್ರೆ ಅದೂ ಆಗ್ಲಿ" ಎಂದ ಗೋವಿಂದ